**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.884-2014**

ಪಿ.ಡಬ್ಲ್ಯೂಃ 15

ಸಿ.ಡಬ್ಲ್ಯೂಃ 15

ಸಾಕ್ಷಿದಾರರ ಹೆಸರು ಃ ಎಂ ಪುಟ್ಟಸ್ವಾಮಿ

ತಂದೆಯ ಹೆಸರು ಃ ಮರಿಗೌಡ

ವಯಸ್ಸು ಃ 56 ವರ್ಷ

ಉದ್ಯೋಗ ಃ ವ್ಯವಸಾಯ

ವಾಸಸ್ಥಳ ಃ ಬಾವಿಕೆರೆ

**ದಿನಾಂಕಃ 19-10-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ನಾನು ಬಾವಿಕೆರೆಯಲ್ಲಿ ಬೀಡಿ ಅಂಗಡಿಯನ್ನು ಇಟ್ಟುಕೊಂಡು ವ್ಯವಹಾರ ಮಾಡುತ್ತಿದ್ದೆನು. ಅಂಗಡಿಯ ಪಕ್ಕದಲ್ಲಿ 2011 ರಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕ್ ಶಾಖೆ ಪ್ರಾರಂಭವಾಯ್ತು. ಅಲ್ಲಿ ಕೆಲಸ ಮಾಡುತ್ತಿದ್ದವರು ನನಗೆ ಪರಿಚಿತರಾದರು. ನಾನೂ ಸಹ ಸದರಿ ಬ್ಯಾಂಕಿನ ಶಾಖೆಯಲ್ಲಿ ನನ್ನ ಉಳಿತಾಯ ಖಾತೆಯನು ಮಾಡಿಸಿದೆನು. 2012 ರಲ್ಲಿ ಆರೋಪಿಯು ನನ್ನ ಬಳಿ ಬಂದು ಹಣದ ಸಹಾಯ ಕೇಳಿದನು. ನಾನು ಆಗ ಇಲ್ಲ ಎಂದು ಹೇಳಿದ್ದಕ್ಕೆ ತಾನು ಬೆಂಗಳೂರಿನಲ್ಲಿ ನಿವೇಶನ ಖರೀದಿಸಿದ್ದು, ಸ್ವಲ್ಪ ಹಣದ ತೊಂದರೆಯಲ್ಲಿದ್ದೇನೆಂದು ತಿಳಿಸಿದರು. ನಂತರ ನನ್ನ ಹೆಸರಿನಲ್ಲಿ ತನ್ನ ಬಳಿ ಇರುವ ಬಂಗಾರದ ಆಭರಣಗಳನ್ನು ಒತ್ತೆ ಇಟ್ಟು ಸಾಲ ಪಡೆಯುತ್ತೇನೆಂದು ತಿಳಿಸಿದರು. ನನ್ನಿಂದ ಆರೋಪಿಯು ಓಚರ್ ಹಾಗೂ ವಿತ್ ಡ್ರಾಂ ಫಾರಂ ಗಳಿಗೆ ಸಹಿ ಪಡೆದುಕೊಂಡರು. ನಂತರ ಒಂದೆರಡು ತಿಂಗಳಾದ ಮೇಲೆ ದುಡ್ಡಿನ ವಿಷಯವನ್ನು ಕೇಳಲಾಗಿ ತನಗೆ ದುಡ್ಡು ಬರುತ್ತದೆ, ಆಗ ಬಿಡಿಸಿಕೊಂಡು ಜಮೆ ಮಾಡುತ್ತೇನೆಂದು ತಿಳಿಸಿದರು. ನಂತರ ಅದೇ ವರ್ಷ 2012 ರಲ್ಲಿ ಆರೋಪಿಯಾದ ರವಿನಾರಾಯಣ್ ರವರು ಬ್ಯಾಂಕಿನಲ್ಲಿ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಪೋಲೀಸ್ ಠಾಣೆಯಲ್ಲಿ ವಿಚಾರಣೆ ಎದುರಿಸುತ್ತಿದ್ದಾರೆಂದು ನನಗೆ ತಿಳಿಯಿತು. ಬಹಳಷ್ಟು ಜನರು ಬ್ಯಾಂಕಿನ ಬಳಿ ಬಂದು ಜಮಾಯಿಸಿದ್ದರು. ಆಗ ಅಲ್ಲಿಗೆ ಪೋಲೀಸರು ಹಾಗೂ ಹೊಸ ಮ್ಯಾನೇಜರ್ ಶಾಖೆಯ ಬಳಿ ಬಂದಿದ್ದರು. ಆಗ ಪೋಲೀಸರು ನಮ್ಮನ್ನು ಕರೆಸಿ ಆರೋಪಿಯು ನಮಗೆ ಹಣ ನೀಡಿದ್ದಾರಾ ಎಂದು ವಿಚಾರಣೆ

ಮಾಡಿದರು. ನಾವು ಇಲ್ಲ ಎಂದು ಹೇಳಿದ್ದಕ್ಕೆ ನಮ್ಮ ಹೇಳಿಕೆಯನ್ನು ಪಡೆದರು. ನಂತರ **2013** ರಲ್ಲಿ ಪೋಲೀಸರಿಂದ ನಮಗೆ ನೋಟೀಸು ಬಂದಿತ್ತು. ನಮ್ಮನ್ನು ಪೊಲೀಸರು ಠಾಣೆಗೆ ಕರೆಸಿ ನಮ್ಮಿಂದ ಮಾಹಿತಿ ಪಡೆದು ಸಹಿ ಪಡೆದಿರುತ್ತಾರೆ. ನನ್ನ ಹೇಳಿಕೆಯನ್ನೂ ಸಹ ಪಡೆದಿರುತ್ತಾರೆ. ಆರೋಪಿಯು ನಮ್ಮ ಹೆಸರಿನ ಖಾತೆಯಲ್ಲಿ ನಕಲಿ ಬಂಗಾರವನ್ನು ಬ್ಯಾಂಕಿನಲ್ಲಿಟ್ಟು ನಮ್ಮ ಬಳಿ ಸಹಿ ಪಡೆದುಕೊಂಡು ಅವರೇ ಬ್ಯಾಂಕಿನಿಂದ ಹಣವನ್ನು ಪಡೆದಿರುತ್ತಾರೆ ಎಂದು ತಿಳಿಯಿತು. ಈ ಎಲ್ಲಾ ವಿಷಯವನ್ನು ನಾನು ಪೋಲೀಸರ ಬಳಿ ತಿಳಿಸಿರುತ್ತೇನೆ.

***ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಂ ಕೆ ಟಿ ವಕೀಲರಿಂದ.***

ನಾನು ***10*** ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯ ದಿನಾಂಕ, ವಾರ ನೆನಪಿಲ್ಲ. ಆರೋಪಿಯು ಹಣ ದುರುಪಯೋಗಪಡಿಸಿಕೊಂಡಿರುವ ವಿಚಾರ ಪೊಲೀಸರು ನನಗೆ ಹೇಳಿದ ಮೇಲೆ ತಿಳಿಯಿತು. ಸಾಮಾನ್ಯವಾಗಿ ನಾವು ಯಾವುದೇ ವ್ಯವಹಾರ ಮಾಡುವಾಗ ಓದಿ, ಹೇಳಿ, ಕೇಳಿ ಸಹಿ ಮಾಡುತ್ತೇನೆಂದರೆ ಸರಿ. ಆರೋಪಿಯು ನನ್ನಿಂದ ಚೆಕ್ಕು, ಓಚರ್ ಮತ್ತು ವಿತ್ ಡ್ರಾ ಫಾರಂ ಗಳಲ್ಲಿ ಸಹಿ ಪಡೆದುಕೊಂಡಿರುತ್ತಾರೆ. ಬ್ಯಾಂಕಿನಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ಖುದ್ದಾಗಿ ನೋಡಿಲ್ಲ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಘಟನೆಯನ್ನು ಹೊರತುಪಡಿಸಿ ಬೇರೆ ಕಡೆ ನಾನು ಚೆಕ್ಕು, ಓಚರ್ ಹಾಗೂ ವಿತ್ ಡ್ರಾ ಫಾರಂಗಳಿಗೆ ಸಹಿ ಮಾಡಿರುವುದಿಲ್ಲ. ನಾನು ಸುಮಾರು ***25*** ವರ್ಷಗಳಿಂದ ಬ್ಯಾಂಕಿನಲ್ಲಿ ಖಾತೆ ತೆರೆದು ವ್ಯವಹಾರ ಮಾಡುತ್ತಿದ್ದೇನೆ. ನಾನು ನನ್ನ ಹೇಳಿಕೆಯನ್ನು ಖುದ್ದಾಗಿ ಪೋಲೀಸರಿಗೆ ಬರೆದುಕೊಟ್ಟಿರುತ್ತೇನೆ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳಿದಂತೆ ಚೆಕ್ಕು, ಓಚರ್ ಹಾಗೂ ವಿತ್ ಡ್ರಾ ಫಾರಂ ಗಳಿಗೆ ಯಾವುದೇ ಸಹಿ ಮಾಡಿರುವುಲ್ಲ, ಅಂತಹ ಯಾವುದೇ ದಾಖಲೆಗಳು ಬ್ಯಾಂಕಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಎಂದೂ ಸಹ ನನ್ನ ಬಳಿ ಬಂದು ಸಾಲ ಕೇಳಿಲ್ಲ ಹಾಗೂ ನನ್ನಿಂದ ಸಹಿ ಪಡೆದು ಯಾವುದೇ ಖಾತೆಯಲ್ಲಿ ನಕಲಿ ಬಂಗಾರ ಇಟ್ಟು ಸಾಲ ಪಡೆದಿಲ್ಲ ಎಂದರೆ ಸುಳ್ಳು.

***ಮರುವಿಚಾರಣೆಃ ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***